MVC No.1021/2022
PW-1 ಯಶವಂತ್
Date: 26.12.2024

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು 1 ನೇ ಎದುರುದಾರರ ಪರ ಶ್ರೀ ಎಂ ಎಸ್ ಆರ್ ವಕೀಲರಿಂದಃ</u>**

ಅಪಘಾತ ದಿನಾಂಕ 26.06.2022 ರಂದು ಆಗಿರುತ್ತದೆ. ನಾನು ಅಪಘಾತವಾದ ಸಮಯದಲ್ಲಿ ಕೆಎ-16-ಇಜಿ-1699 ವಾಹನದಲ್ಲಿ ಪ್ರಯಾಣ ಮಾಡುತ್ತಿದ್ದೆನು. ಸದರಿ ವಾಹನ ಕಾರ್ತಿಕ್ ರವರಿಗೆ ಸೇರಿದ ವಾಹನ ಎಂದರೆ ಸರಿ. ಸದರಿ ದಿವಸ ಕಾರ್ತೀಕ್ ರವರೆ ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಕಾರ್ತಿಕ್ ರವರಿಗೆ ಡಿಎಲ್ ಇರದೆ ಇರುವುದರಿಂದ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾಹನೆ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇರುವುದಿಲ್ಲ. ಅಪಘಾತವಾದ ದಿವಸ ನಾನು ಪರಶುರಾಂಪುರದಿಂದ ಮಹಾದೇವಪುರಕ್ಕೆ ಹೋಗುತ್ತಿದ್ದೆನು. ಸದರಿ ರಸ್ತೆಯಲ್ಲಿ ಕಡೇವುಡೆವು ಗೇಟ್ ಪರಶುರಾಂಪುರದ ನಂತರ ರಸ್ತೆಯ ಬಲಬದಿಗೆ ಬರುತ್ತದೆ ಎಂದರೆ ಸರಿ. ತದನಂತರದಲ್ಲಿ ಗೌರಿಪುರದ ಗೇಟ್ ನಂತರದಲ್ಲಿ ನಾಗಪ್ಪನಹಳ್ಳಿ ಗೇಟ್ ಬರುತ್ತದೆ ಎಂದರೆ ಸರಿ. ನಾಗಪ್ಪನಹಳ್ಳಿ ಗೇಟ್ ಕೂಡ ರಸ್ತೆಯ ಬಲಬಾಗಕ್ಕೆ ಬರುತ್ತದೆ ಎಂದರೆ ಸರಿ. ನಾನು ಏಕಾಏಕಿ ಯಾವುದೇ ಸಿಗ್ನಲ್ ನೀಡದೆ ನನ್ನ ಬೈಕ್ ಅನ್ನು ರಸ್ತೆಯ ಬಲಬಾಗಕ್ಕೆ ತೆಗೆದುಕೊಂಡ ಕಾರಣಕ್ಕಾಗಿ ನನ್ನ ತಪ್ಪಿನಿಂದಲೇ ಅಪಘಾತ ಸಂಬವಿಸಿತು ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಯಾವುದೇ ಗಾಯಗಳು ಆಗದೆ ಇದ್ದರೂ ಕೂಡ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದ ಕೂಡಲೇ ನಾನು ಮೊದಲು ಪರಶುರಾಂಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡೆನು. ಆ ಬಗ್ಗೆ ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸರ್ಕಾರಿ ಆಸ್ಪತ್ರೆ 100 ಮೀಟರ್ ಅಂತರದಲ್ಲಿಯೇ ಪರಶುರಾಂಪುರ ಪೊಲೀಸ್ ಠಾಣೆ ಇರುತ್ತದೆ ಎಂದರೆ ಸರಿ. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡ ಸಂದರ್ಬದಲ್ಲಿಯೇ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ. ಅಪಘಾತ ನನ್ನ ತಪ್ಪಿನಿಂದ ಸಂಬವಿಸಿರುವ ಕಾರಣಕ್ಕಾಗಿ ನಾನು ಅದೇ ದಿವಸ ದೂರನ್ನು ನೀಡಿರುವುದಿಲ್ಲ. ದೂರನ್ನು ನನ್ನ ತಾಯಿ ದಿನಾಂಕ 28.06.2022 ರಂದು ನೀಡಿರುತ್ತಾರೆ. ನಾನು, ಕಾರ್ತಿಕ್ ಮತ್ತು ನನ್ನ ತಾಯಿ ಷರಿಕ್ಕಾಗಿ ಲಾರಿ ಚಾಲಕನ ವಿರುದ್ದ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ.

ಪರಶುರಾಂಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ನಾನು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡೆನು. ಆ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ತದನಂತರ ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡೆನು. ನಾನು ಸದರಿ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ. ನನ್ನನ್ನು ಕೂಡಲೇ ಅಲ್ಲಿಂದ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಸದರಿ ಆಸ್ಪತ್ರೆಯಲ್ಲಿ ನಾನು 40 ದಿವಸಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡೆನು. ನಾನು 40 ದಿವಸಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ನನಗೆ 4 ಲಕ್ಷ ರೂಪಾಯಿ ತಗುಲಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ ಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಅಂಗನ್ಯೂನತೆ ಪ್ರಮಾಣ ಪತ್ರವನ್ನು ಡಾಃ ರಾಜೇಶ್ ರವರಿಂದ ಪಡೆದುಕೊಂಡೆನು. ಅದನ್ನು ಯಾವಾಗ ಪಡೆದುಕೊಂಡೆನು ಎಂದು ನನಗೆ ಹೇಳಲಾಗುವುದಿಲ್ಲ.

ನನಗೆ ಈಗ ತೋರಿಸಿದ ಅಂಗನ್ಯೂನತೆ ಪ್ರಮಾಣ ಪತ್ರದ ನಕಲು ಪ್ರತಿ ನನಗೆ ಸೇರಿದೆ ಎಂದರೆ ಸರಿ. (ಸದರಿ ದಾಖಲಾತಿಯನ್ನು ಅರ್ಜಿದಾರರ ಪರ ವಕೀಲರು 1ನೇ ಎದುರುದಾರರ ಪರ ವಕೀಲರಿಗೆ ಅರ್ಜಿದಾರರು ಸಲ್ಲಿಸಿದ ದಾಖಲಾತಿಗಳ ಪ್ರತಿಗಳನ್ನು ನೀಡುವ ಕಾಲಕ್ಕೆ ನೀಡಿರುತ್ತಾರೆ ಎಂದು ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ). ಸಾಕ್ಷಿ ಸದರಿ ದಾಖಲಾತಿಯನ್ನು ಗುರುತಿಸಿರುವ ಕಾರಣ ಅದನ್ನು ನಿಆರ್ 1 ಎಂದು ಗುರುತಿಸಲಾಯಿತು. ನಿಆರ್ 1 ರ ಪ್ರಕಾರ ನನ್ನ ಅಂಗನ್ಯೂನತೆ 45 % ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ವೈದ್ಯರು ನನ್ನ ಅಂಗನ್ಯೂನತೆ 45% ನೀಡಿದ್ದರು ಕೂಡ ನಾನು ನಿಪಿ 11 ಅನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ಪುನಃ ದಿನಾಂಕ 13.07.2024 ರಂದು ಇನ್ನೊಂದು ಅಂಗನ್ಯೂನತೆ ಪ್ರಮಾಣ ಪತ್ರವನ್ನು ನಿಪಿ 11 ರ ಪ್ರಕಾರ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ವೈದ್ಯಕೀಯ ಬಿಲ್ ಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಸಂಬವಿಸಿದ್ದರು ಕೂಡ ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಸಂಬವಿಸಿರುವ ಕಾರಣ 1ನೇ ಎದುರುದಾರರು ಯಾವುದೇ ಪರಿಹಾರದ ಹಣವನ್ನು ಕೊಡುವ ಬಾದ್ಯಸ್ತಿಕೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು 3 ನೇ ಎದುರುದಾರರ ಪರ ವಕೀಲರಿಂದ**

ಅಪಘಾತವಾದ ಬಗ್ಗೆ ನಾನು ಪರಶುರಾಂಪುರದ ಸರ್ಕಾರಿ ಆಸ್ಪತ್ರೆಯ ವೈದ್ಯರಿಗೆ ಅಪಘಾತದ ಬಗ್ಗೆ ಮಾಹಿತಿಯನ್ನು ನೀಡಿದ್ದೆನು. ಅಲ್ಲಿ ವೈದ್ಯರು ಎಂ ಎಲ್ ಸಿ ಪ್ರಕರಣ ದಾಖಲು ಮಾಡಿಕೊಂಡರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ಕಾರಣ ನನಗೆ ಪ್ರಜ್ಞೆ ತಪ್ಪಿತ್ತು. ಸದರಿ ದಿವಸ ನನ್ನೊಂದಿಗೆ ನನ್ನ ತಾಯಿ ಮತ್ತು ಕಾರ್ತಿಕ್ ರವರು ಇದ್ದರು. ನನ್ನ ತಾಯಿ ಅಥವಾ ಕಾರ್ತಿಕ್ ವೈದ್ಯರಿಗೆ ಅಪಘಾತದ ಬಗ್ಗೆ ಮಾಹಿತಿ ಕೊಟ್ಟರೊ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ವೈದ್ಯರು ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ಕೊಟ್ಟರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಆಸ್ಪತ್ರೆಗೆ ಬಂದಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅಪಘಾತವಾದ ಸ್ಥಳಕ್ಕೆ ಬಂದಿದ್ದರು ಎಂದು ನುಡಿದಿರುತ್ತಾರೆ. ಪೊಲೀಸರು ಸ್ಥಳದಲ್ಲಿ ನನ್ನ ತಾಯಿಯ ಅಥವಾ ಕಾರ್ತಿಕ್ ನ ಹೇಳಿಕೆಯನ್ನು ಪಡೆದುಕೊಂಡರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ದಾವಣಗೆರೆಯ ಎಸ್ ಎಸ್ ಆಸ್ಪತ್ರೆಯಲ್ಲಿ ನನಗೆ ಡಾಃ ನಿತಿನ್ ರವರು ಶಸ್ತ್ರ ಚಿಕಿತ್ಸೆಯನ್ನು ಮಾಡಿರುತ್ತಾರೆ. ಸದರಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ನಾನು ಬೇರೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಕೈಯನ್ನು ತೋರಿಸಲು ಮಣಿಪಾಲ್ ಮತ್ತು ಶಿವಮೊಗ್ಗದ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡೆನು. ವೈದ್ಯರು ಅಲ್ಲಿ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ತಿಳಿಸಿದ್ದರು. ಆದರೆ ನಮ್ಮ ಬಳಿ ಹಣ ಇರಲಿಲ್ಲ. ಸದರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನು ಪಡೆದುಕೊಂಡ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಣಗೆರೆಯ ಎಸ್ ಎಸ್ ಆಸ್ಪತ್ರೆಯಲ್ಲಿ ನನಗೆ ಡಾಃ ನಿತಿನ್ ರವರು ನಾನು ಸಂಪೂರ್ಣ ಗುಣಮುಖನಾದ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಡಾಃ ನಿತಿನ್ ರವರು ನನಗೆ ಪುನಃ ಅವರ ಬಳಿ ಬಂದು ಚಿಕಿತ್ಸೆಯನ್ನು ಪಡೆದುಕೊಳ್ಳುವಂತೆ ತಿಳಿಸಿದ್ದರು.

ನಾನು ಡಾಃ ರಾಜೇಶ್ ರವರ ಬಳಿ ನನ್ನ ಕೈಯನ್ನು ತೋರಿಸಿಕೊಳ್ಳಲು ಹೋಗಿದ್ದೆನು. ನಾನು ಅವರ ಬಳಿ ಮೂರು ನಾಲ್ಕು ಬಾರಿ ಹೋಗಿದ್ದೆನು. ಆ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಡಾಃ ರಾಜೇಶ್ ರವರ ಬಳಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಡಾಃ ನಿತಿನ್ ರವರ ಬಳಿ ನಾನು ಪುನಃ ಹೋಗಿ ನನಗೆ ಇರುವ ತೊಂದರೆಗಳನ್ನು ತಿಳಿಸಿರುತ್ತೇನೆ. ಹೆಚ್ಚಿನ ಪರಿಹಾರಗೋಸ್ಕರ ನಾನು ನಿಪಿ 11 ಮತ್ತು ನಿಆರ್ 1 ಅನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಕಾರ್ತಿಕ್ ರವರ ತಪ್ಪಿನಿಂದ ಸಂಬವಿಸಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಲಾರಿ ಚಾಲಕನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಲಾರಿ ವಿಮೆಗೆ ಒಳಪಟ್ಟಿರಲಿಲ್ಲ ಎಂದು ಪೊಲೀಸರು ದೋಷರೋಪಣ ಪಟ್ಟಿಯಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದಾಗ ಲಾರಿ ವಿಮೆಗೆ ಒಳಪಟ್ಟಿರಲಿಲ್ಲ ಮತ್ತು ಲಾರಿ ಚಾಲಕನಿಗೆ ಯಾವುದೇ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಮತ್ತು ಆ ಕಾರಣ 3 ನೇ ಎದುರುದಾರರು ಯಾವುದೇ ಪರಿಹಾರದ ಹಣವನ್ನು ಕೊಡುವ ಬಾದ್ಯಸ್ಥಿಕೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನಗೆ ತೀವ್ರ ಸ್ವರೂಪದ ಮೂಳೆ ಮುರಿತಿ ಆಗಿತ್ತು ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮೂರು ನಾಲ್ಕು ಬಾರಿ ಶಸ್ತ್ರ ಚಿಕಿತ್ಸೆ ಮಾಡಿರುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಗೋಸ್ಕರ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.